**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 721/2024 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | :- | ಸತ್ಯಜಿತ ಚವ್ವಾಣ |
| ತಂದೆ/ಗಂಡನ ಹೆಸರು | :- | ರವೀಂದ್ರ |
| ವಯಸ್ಸು | :- | 52 ವರ್ಷ |
| ಉದ್ಯೋಗ | :- | ಶೋ ರೂಮ್ ಮಾಲೀಕ |
| ವಾಸಸ್ಥಳ | :- | ಬಾಗಲಕೋಟ |

ಸಾಕ್ಷಿಯನ್ನು ದಿಃ06.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1.ದಿಃ09.04.2024 ರಂದು ನಾನು ಬೆಳಿಗ್ಗೆ 10-00 ಗಂಟೆಗೆ ನನ್ನ ಲೋಕಾಪೂರ ರಸ್ತೆಯಲ್ಲಿ ಇದ್ದ ರಾಯಲ್ ಎನಫಿಲ್ಡ ಶೋರೂಂಗೆ ಹೋಗಿದ್ದೆ. ನನ್ನೊಂದಿಗೆ ಪ್ರೀತಿ ಮ್ಯಾಥ್ಯೊ ಎನ್ನುವ ನನ್ನ ಅಕೌಂಟ್ಸ ನೋಡಿಕೊಳ್ಳುವವರು ಇದ್ದರು. ನಾವು ಅಲ್ಲಿಗೆ ಬಂದಾಗ ಆರೋಪಿತ ಶೋರೂಂನಲ್ಲಿ ಇದ್ದನು. ಹಿಂದಿನ ದಿನ ಬ್ಯಾಂಕ ರಜೆ ಇದ್ದ ಕಾರಣ ಆ ದಿನ ಸಂಗ್ರಹಿಸಿದ ಮೊತ್ತ ಸದರಿ ಆರೋಪಿತನಾದ ನಿಂಗಣ್ಣ ಅರ್ಜುನ ಬಿಸರೆಡ್ಡಿ ಅವರ ಬಳಿ ಇತ್ತು. ನಾವು ಎಲ್ಲಾ ಅಕೌಂಟ್ಸಗಳನ್ನು ತೆಗೆದು ನೋಡಿದಾಗ ಆರೋಪಿತ ತನ್ನ ಬಳಿ ರೂ.10,21,110/- ಗಳು ಇವೆ ಎಂದು ಹೇಳಿದನು. ಆತ ಸದರಿ ಮೊತ್ತ ತನ್ನ ಮನೆಯಲ್ಲಿ ಇಟ್ಟಿದ್ದಾನೆ ಎಂದು ಮತ್ತು ಅದನ್ನು ತೆಗೆದುಕೊಂಡು ಬಂದು ನಮಗೆ ನೀಡುತ್ತಾನೆ ಎಂದು ತಿಳಿಸಿದನು. ತದನಂತರ ಆತ ಶೋರೂಂನಿಂದ ಹೊರಟನು. ಅರ್ಧ ಗಂಟೆ ಆದ ನಂತರ ಆತ ಹಿಂದಿರುಗಿ ಬರದ ಕಾರಣ ನಾನು ಆತನಿಗೆ ಕರೆ ಮಾಡಿದೆ. ಆತ ನನ್ನ ಕರೆಯನ್ನು ಸ್ವೀಕರಿಸಲಿಲ್ಲ. ಆತನ ಮೊಬೈಲ ಸಂಖ್ಯೆ ಈಗ ನನಗೆ ನೆನಪಿಲ್ಲ. ತದನಂತರ 15 ನಿಮಿಷಗಳ ನಂತರ ಮತ್ತೆ ಕರೆ ಮಾಡಿದಾಗ ಆತನ ಮೊಬೈಲ ಸ್ವಿಚ್ ಆಫ್ ಆಗಿತ್ತು.

2.ಮಧ್ಯಾಹ್ನ ಊಟದ ಅವಧಿ ಮುಗಿಯುವರೆಗೆ ಆತನು ಬರುತ್ತಾನೆ ಎಂದು ನಾವು ಕಾಯ್ದಿದ್ದು ತದನಂತರ ನಾವು ಆತನ ಮನೆಗಾಗಿ ನಾವು ಹುಡಿಕಿದೆವು. ಆತನ ಮನೆ ನಮಗೆ ದೊರಕಿದರು ಸಹ ಆತನ ಸಹೋದರಿ ಎಂದು ಹೇಳುವ ಮಹಿಳೆ ಮಾತ್ರ ಮನೆಯಲ್ಲಿ ಇದ್ದು, ಆತನ ತಾಯಿ ಹಾಗೂ ಆರೋಪಿತ ಮನೆಯಲ್ಲಿ ಇರಲಿಲ್ಲ. ಸಂಜೆ 5 ಗಂಟೆಗೆ ಆರೋಪಿತನ ತಾಯಿ ಮನೆಗೆ ಬಂದಾಗ ಅಕೆಗೆ ಆದ ಘಟನೆಯನ್ನು ವಿವರಿಸಿದ್ದು, ಆಕೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದು,

ಅದರಂತೆ ನಾನು ಮುಧೋಳ ಪೊಲೀಸ ಠಾಣೆಗೆ ಹೋಗಿ ದೂರು ಸಲ್ಲಿಸಿದೆ. ಆ ದಿನ ನಾವು ಸಲ್ಲಿಸಿದ ದೂರು ಸ್ವೀಕರಿಸದೆ ಮರುದಿನ ದೂರು ಸ್ವೀಕರಿಸಿ, ತದನಂತರ ಪ್ರ.ವ.ವ ದಾಖಲಿಸಿರುತ್ತಾರೆ. ನಾನು ಪೊಲೀಸರ ಮುಂದೆ ಸದರಿ ಘಟನೆಗೆ ಕುರಿತು ಹೇಳಿಕೆ ನೋಡಿರುತ್ತೇನೆ.

3.ಸಾಕ್ಷಿಗೆ ಈಗ ದೂರನ್ನು ತೋರಿಸುತ್ತಿದ್ದು, ಅದರ ಮೇಲಿನ ತಮ್ಮ ಸಹಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು, ಅದರ ಮೇಲಿನ ಸಹಿ ಗುರುತಿಸಿದ್ದರಿಂದ ಸದರಿ ಪ್ರ.ವ.ವ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**ಪಾಟೀ ಸವಾಲು :ಸ.ಸ.ಅ ರವರಿಂದ**

1.ನೀವು ದಿಃ24.04.2024 ರಂದು ದೂರು ಸಲ್ಲಿಸಿದ್ದೀರಿ ಎಂದರೆ ಸರಿ. ನೀವು ಆರೇಪಿತನ ಮೊಬೈಲ ಸಂಖ್ಯೆ 9972749057 ಮತ್ತು 7411229057 ಗಳಿಗೆ ಕರೆ ಮಾಡಿದ್ದಿರಿ ಎಂದರೆ ಸರಿ.

**ಪಾಟೀ ಸವಾಲು : ಶ್ರೀ.ಕೆ.ಐ.ಜೆ ವಕೀಲರಿಂದ ಆರೋಪಿಯವರ ಪರವಾಗಿ**

1.ನೀವು ಈಗ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ವಿಷಯವನ್ನು ಪೊಲೀಸರ ಸಮಕ್ಷಮ ಹೇಳಿಲ್ಲ ಎಂದರೆ ಸರಿಯಲ್ಲ. ಮುಧೋಳದಲ್ಲಿ ಇದ್ದ ನಿಮ್ಮ ಸಂಸ್ಥೆಯ ಹೆಸರು ಏನು ಎಂದರೆ ಮುಧೋಳ ಮೋಟರ್ಸ ಎಂದು ಹೇಳುತ್ತಾರೆ. ಮುಧೋಳ ಮೋಟರ್ಸ ಇದು ಪಾರ್ಟನರಶಿಪ್ ಫರ್ಮ ಆಗಿರುತ್ತದೆ. ನೀವು ಪೊಲೀಸರ ಮುಂದೆ ಸದರಿ ಪಾಲುದಾರಿಕೆ ಪರವಾಗಿ ದೂರು ಸಲ್ಲಿಸಲು ನಿಮಗೆ ಅಧಿಕಾರ ಪತ್ರ ಇದೆ ಎಂದು ಹೇಳಿದ್ದೀರಾ ಎಂದರೆ ಹೇಳಿದ್ದೇನೆ ಎಂದು ಹೇಳುತ್ತಾರೆ. ನೀವು ಸದರಿ ಅಧಿಕಾರ ಪತ್ರವನ್ನು ಹಾಜರಪಡಿಸಿದ್ದೀರಾ ಎಂದರೆ ಪೊಲೀಸರು ಕೇಳಲಿಲ್ಲ, ಆದ್ದರಿಂದ ನೀಡಲಿಲ್ಲ ಎಂದು ಹೇಳುತ್ತಾರೆ. ನಾನು ಮುಧೋಳ ನಗರಸಭೆಯಿಂದ ಅಗಂಡಿ ಮುಗಟ್ಟು ಕಾಯ್ದೆ ಅಡಿ ಅನುಮತಿ ಪಡೆದಿದ್ದೀರಾ ಎಂದರೆ ಪಡೆದಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ಅಂಗಡಿ ನಡೆಸಲು ಪರವಾನಿಗೆ ಇದೆ ಎಂದು ತೋರಿಸಲು ದಾಖಲಾತಿ ಪೊಲೀಸರಿಗೆ ನೀವು ನೀಡಿಲ್ಲ ಎಂದರೆ ಪೊಲೀಸರು ಕೇಳಿಲ್ಲ ಆದ್ದರಿಂದ ನೀಡಿಲ್ಲ ಎಂದು ಹೇಳುತ್ತಾರೆ. ನನ್ನ ಶೋಂ ರೂಂನ ಜಿ.ಎಸ್.ಟಿ ನೋಂದಣಿ ಇರುತ್ತದೆ. ಮುಧೋಳ ಶೋರೂಂನ ಯಾವುದೇ ಜಿ.ಎಸ್.ಟಿ ನಂಬರ ಇಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ನಾನು ಸದರಿ ಶೋ ರೂಂ ಪಾರಂಭ ಮಾಡಿರುತ್ತೇನೆ. ಆರೋಪಿತನನ್ನು ನಿಮ್ಮ ಶೋ ರೂಂನಲ್ಲ ಸೇಲ್ಸ ಎಕ್ಸಿಕ್ಯೂಟಿವ ಆಗಿ ನೇಮಕ ಮಾಡುವ ಪೂರ್ವದಲ್ಲಿ ಯಾವುದಾದರೂ

ಜಾಹೀರಾತು ನೀಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಆರೋಪಿತ ನಿಮ್ಮ ಬಳಿ ತನ್ನನ್ನು ಸೇಲ್ಸ ಎಕ್ಸಿಕ್ಯೂಟಿವ ಆಗಿ ತೆಗೆದುಕೊಳ್ಳಬೇಕು ಎಂದು ಯಾವುದಾದರೂ ಅರ್ಜಿ ಸಲ್ಲಿಸಿದ್ದನಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನೀವು ಆರೋಪಿತನನ್ನು ನಿಮ್ಮ ಶೋ ರೂಂನಲ್ಲಿ ಕೆಲಸ ಮಾಡಲು ನೇಮಕ ಆಗಿದ್ದಕ್ಕೆ ಆತನ ಸಹಿ ನೇಮಕಾತಿ ಪತ್ರಕ್ಕೆ ಪಡೆದಿದ್ದೀರಾ ಎಂದರೆ ನಾನು ನೀಡಿದ್ದೇನೆ ಆತನಿಂದ ಸಹಿ ಪಡೆದಿಲ್ಲ ಎಂದು ಹೇಳುತ್ತಾರೆ. ನೀವು ಆರೋಪಿತ ನಿಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ನೇಮಕಾತಿ ಪತ್ರವನ್ನು ಪೊಲೀಸರು ಕೇಳಿದ ನಂತರ ನಿಮ್ಮ ಅನುಕೂಲಕ್ಕೆ ತಕ್ಕಂತೆ ತಯಾರಿಸಿ ನೀಡಿದ್ದೀರಿ ಎಂದರೆ ಸರಿಯಲ್ಲ.

2.ನಿಮ್ಮ ಶೋರೂಂನಲ್ಲಿ ಸಿಸಿಟಿವಿ ಇದೆಯಾ ಎಂದರೆ ಇದೆ ಎಂದು ಹೇಳುತ್ತಾರೆ. ನಿಮಂ ಸಂಸ್ಥೆಯ ಎಲ್ಲಾ ಲೆಕ್ಕಪತ್ರಗಳನ್ನು ಬರೆದಿಟ್ಟಿದ್ದೀರಾ ಎಂದರೆ ಇಟ್ಟಿದ್ದೇನೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ನಿಮ್ಮ ಪ್ರಕಾರ 6 ಜನ ದಿ:09.04.2024 ಕ್ಕಿಂತ ಮುಂಚೆ ಬುಕ್ಕಿಂಗ ಮಾಡಿದರು ಎಂದು ಹೇಳಬಹುದಾ ಎಂದರೆ ಹೇಳಬಹುದು ಎಂದು ಹೇಳುತ್ತಾರೆ. ನನಗೆ ಅವರ ಹೆಸರು ನೆನಪಿಲ್ಲ, ಪೊಲೀಸರಿಗೆ ಹೆಸರು ಮತ್ತು ಅವರಿಂದ ಪಡೆದ ಮೊತ್ತದ ಬಗ್ಗೆ ನೀಡಿದ್ದೇನೆ ಎಂದು ಹೇಳುತ್ತಾರೆ. ನೀವು ಯಾವ ವ್ಯಕ್ತಿ ಎಷ್ಟು ಹಣವನ್ನು ಯಾವ ದಿನಾಂಕದಂದು ಹೇಳಬಹುದಾ ಎಂದರೆ ಮೌಖಿಕವಾಗಿ ಹೇಳಲು ಬರುವುದಿಲ್ಲ, ದಾಖಲಾತಿ ಇದೆ ಎಂದು ಹೇಳುತ್ತಾರೆ. 6 ಜನ ವ್ಯಕ್ತಿಗಳು ಮುಧೋಳದಲ್ಲಿ ದ್ವಿಚಕ್ರ ವಾಹನ ಬುಕ್ಕಿಂಗ ಮಾಡಿದರು. ಬುಕ್ಕಿಂಗ ಮೊತ್ತವನ್ನು ಮುಧೋಳದಲ್ಲಿ ನೀಡಿರುತ್ತಾರೆ. ನೀವು ಬುಕ್ಕಿಂಗ ಮೊತ್ತ ಪಡೆದ ನಂತರ ಹಣ ಯಾರಿಂದ ಪಡೆದಿರುತ್ತೀರೋ ಅವರಿಗೆ ರಸೀದಿ ನೀಡುತ್ತೀರಿ ಎಂದರೆ ನೀಡುತ್ತೇವೆ ಎಂದು ಹೇಳಿ, ಸಾಕ್ಷಿ ಮುಂದುವರೆದು ನಗದು ರೂಪದಲ್ಲಿ ನೀಡಿದರೆ ಮಾತ್ರ ಆ ರೀತಿ ಸ್ವೀಕರಿಸಿದ್ದಕ್ಕೆ ನೀಡುತ್ತೇವೆ ಎಂದು ಹೇಳುತ್ತಾರೆ. ವಾಹನವನ್ನು ಮಾರಾಟ ಮಾಡಿದರೆ ಸೇಲ್ಸ ಇನವಾಯಿಸ್‌ನಲ್ಲಿ ಎಲ್ಲಾ ವಿವರ ನಮೂದಿಸಿರುತ್ತೇವೆ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಆ ರೀತಿ ಬುಕ್ಕಿಂಗ ಆಗಿತ್ತು ಎಂದು ತೋರಿಸಲು ರಸೀದಿ ಹಾಜರಪಡಿಸಿಲ್ಲ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಡೇ ಬುಕ್ಕನ್ನು ಇಟ್ಟಿರುತ್ತೀರಿ ಎಂದರೆ ಇಟ್ಟಿರುತ್ತೇವೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅದು ಟ್ಯಾಲಿ ಸಾಫ್ಟವೇರನಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಆ ರೀತಿ ಹಣ ಪಡೆದಿದ್ದಕ್ಕೆ ಪರ್ಸನಲ್ ಲೆಜರ ತಯಾರುಗುತ್ತದೆ ಎಂದರೆ ಸರಿಯಲ್ಲ. ಸದರಿ ಡೇ ಬುಕ್ಕನ್ನು ನೀವು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ.

3.ನೀವು ವಾಹನಗಳನ್ನು ಡೆಲಿವರಿ ಮಾಡಿದ ಬಗ್ಗೆ ರಜಿಸ್ಟರ ಇಟ್ಟಿರುತ್ತೀರಾ ಎಂದರೆ ಇಟ್ಟಿರುತ್ತೇವೆ ಎಂದು ಹೇಳುತ್ತಾರೆ. ನೀವು ಮೋಟರ ಸೈಕಲ ಮಾರುವಾಗ ಗ್ರಾಹಕರಿಂದ ಯಾವ ದಾಖಲಾತಿ ಪಡೆಯುತ್ತೀರಾ ಎಂದರೆ ಆಧಾರ ಕಾರ್ಡ ಮತ್ತು ಪ್ಯಾನಕಾರ್ಡ ಎಂದು ಸಾಕ್ಷಿ ಹೇಳುತ್ತಾರೆ. ದ್ವಿಚಕ್ರ ವಾಹನ ಮಾರುವ ಪೂರ್ವದಲ್ಲಿ ಫಾರಂ ನಂ.20, 21 ಮತ್ತು 22 ಗಳನ್ನು ತಯಾರಿಸಿರುತ್ತೀರಿ ಎಂದರೆ ದ್ವಿಚಕ್ರ ವಾಹನ ತಯಾರು ಮಾಡಿದ ನಂತರ ತಯಾರಿಸುತ್ತೇವೆ ಎಂದು ಹೇಳುತ್ತಾರೆ. ನೀವು ವಾಹನವನ್ನು ಡೆಲಿವರಿ ಮಾಡುವ ಪೂರ್ವದಲ್ಲಿ ಇನವಾಯಿಸ್, ಸೇಲ್ಸ ಸರ್ಟಿಫಿಕೇಟ, ಇನ್ಸೂರೆನ್ಸ, ಟೆಂಪರರಿ ಆರ್.ಸಿ, ವಾರೆಂಟ್ ಬುಕಲೆಟ್ ಮತ್ತು ಯುಸರ್ ಮ್ಯಾನುವಲ್ ಇವುಗಳನ್ನು ತಯಾರಿಸಿಯೇ ವಾಹನ ಡೆಲಿವರಿ ಮಾಡುತ್ತೀರಿ ಎಂದರೆ ಇನವಾಯಸ್, ಇನ್ಸೂರೆನ್ಸ, ಟ್ಯಾಕ್ಸ ಪೇರ ರಸೀದಿ, ಯುಸರ್ ಮ್ಯಾನುವಲ್ ಹಾಗೂ ವಾರೆಂಟ್ ಕಾರ್ಡ ಒಂದರಲ್ಲಿ ಇದ್ದು ಅವುಗಳನ್ನು ನೀಡುತ್ತೇವೆ ಎಂದು ಹೇಳುತ್ತಾರೆ. ವಾಹನದ ಕೀ ನೀಡಿದಾಗ ನೀವು ಛಾಯಾಚಿತ್ರ ತೆಗೆದುಕೊಂಡಿದ್ದೀರಾ ಎಂದರೆ ನಾನು ತೆಗೆದುಕೊಂಡಿಲ್ಲ, ಆರೋಪಿತನೆ ತೆಗೆದಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಮುಧೋಳದಲ್ಲಿ ನಿಮಗೆ ಶೋರೂಂ ನಡೆಸಲು ಯಾವುದೇ ಪರವಾನಿಗೆ ಇಲ್ಲ, ಜಿ.ಎಸ್.ಟಿ ಸಂಖ್ಯೆ ಸಹ ಇಲ್ಲ ಎಂದರೆ ಸರಿಯಲ್ಲ. ಶೋ ರೂಂನಲ್ಲಿ ಸೇಲ್ಸ ರಜಿಸ್ಟರ ಮತ್ತು ಸ್ಟಾಕ ರಜಿಸ್ಟರ ಇರುತ್ತದೆ. ಸದರಿ ದಾಖಲಾತಿಯನ್ನು ನೀವು ಪೊಲೀಸರಿಗೆ ನೀಡಿಲ್ಲ ಎಂದರೆ ಕೇಳಿಲ್ಲ, ಆದ್ದರಿಂದ ನೀಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

4. ನೀವು ರೂ.10,21,110/- ಗಳನ್ನು ನಗದು ರೂಪದಲ್ಲಿ ಪಡೆದಿದ್ದಕ್ಕೆ ಗ್ರಾಹಕರಿಗೆ ರಸೀದಿ ನೀಡಿದ್ದೀರಾ ಎಂದರೆ ಅರೋಪಿತ ರಸೀದಿ ನೀಡಿಲ್ಲ ಎಂದು ಹೇಳುತ್ತಾರೆ. ಆ ರೀತಿ ಪೊಲೀಸರಿಗೆ ನೀವು ಹೇಳಿದ್ದೀರಾ ಎಂದರೆ ಹೇಳಿದ್ದೇನೆ ಎಂದು ಹೇಳುತ್ತಾರೆ. ನೀವು ಯಾವ ಆಧಾರದ ಮೇಲೆ ರೂ.10,21,110/- ರೂಪಾಯಿ ನಿಮ್ಮ ಪ್ರಕಾರ ಆರೋಪಿತ ತೆಗೆದುಕೊಂಡಿದ್ದಾನೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಆತನ ಯುಪಿಐ ಖಾತೆಗೆ ಹಣವನ್ನು ವರ್ಗಾವಣೆ ಮಾಡಿದ್ದು ಮತ್ತು ನಗದು ರೂಪದಲ್ಲಿ ಸ್ವಲ್ಪ ಹಣ ತನ್ನ ಬಳಿ ಇದೆ ಎಂದು ತಾವೆಲ್ಲರೂ ಕುಳಿತು ಲೆಕ್ಕಾಚಾರ ಮಾಡಿದಾಗ ಬಂದ ಮೊತ್ತ ಎಂದು ಹೇಳುತ್ತಾರೆ. ಗೂಗಲ್ ಪೇದಲ್ಲಿ ಎಷ್ಟು ಮೊತ್ತ ಬಂದಿದೆ ಎಂದು ಈಗ ನನಗೆ ಹೇಳಲು ಬರುವುದಿಲ್ಲ. ನಗದು ರೂಪದಲ್ಲಿ ಎಷ್ಟು ಹಣ ಬಂದಿದೆ ಎಂದು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ದೂರಿನಲ್ಲಿ ಆರೋಪಿತನ ಬಳಿ ರೂ.10,21,110/- ರೂಪಾಯಿ ನಗದು ರೂಪದಲ್ಲಿ ಇತ್ತು ಎಂದು ಸುಳ್ಳು ಬರೆಸಿದ್ದೀರಿ ಎಂದರೆ ಸರಿಯಲ್ಲ.

5.ಶೋರೂಂ ಅಡಿಟ್ ಆಗಿರುತ್ತದೆ. ಆಡಿಟರ್ಸ ನಿಮಗೆ ವ್ಯಕ್ತಿಯಿಂದ 2 ಲಕ್ಷ ರೂಪಾಯಿಗಿಂತ ಹೆಚ್ಚಿಗೆ ತೆಗೆದುಕೊಳ್ಳಬಾರದು ಎಂದು ತಿಳಿಸಿದ್ದಾರಾ ಎಂದರೆ ತಿಳಿಸಿದ್ದಾರೆ ಎಂದು ಹೇಳುತ್ತಾರೆ. ನೀವು ಆದಾಯ ತೆರಿಗೆ ಕಾಯ್ದೆ ವಿರುದ್ಧ ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಂಸ್ಥೆ ಮೂಲಕ ದಿಃ09.04.2024 ರಂದು 6 ದ್ವಿಚಕ್ರ ವಾಹನಗಳು ಮಾರಾಟ ಆಗಿವೆ ಎಂದು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿಃ08.04.2024 ಮತ್ತು ಃ09.04.2024 ರಂದು ಮಾರಾಟ ಆಗಿರುತ್ತವೆ ಎಂದು ಹೇಳುತ್ತಾರೆ. ಅ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನ ಬಳಿ ರೂ.10,21,110/- ಗಳು ಸಂಸ್ಥೆಯವು ಇದ್ದವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಿಃ09.04.2024 ರಂದು ಮತ್ತು ದಿಃ10.04.2024 ರಂದು ಕ್ಲೊಸಿಂಗ ಬ್ಯಾಲೆನ್ಸ ಎಷ್ಟು ಇತ್ತು ಎಂದು ಹೇಳಲು ಬರುವುದಿಲ್ಲ. ಮುಧೋಳ ಶೊರೊಂ ಹೆಸರಿನಲ್ಲಿ ಯಾವುದೇ ಬಿಲ್ಲು ಆಗಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದೂರನ್ನು ಆರೋಪಿತನ ವಿರುದ್ದ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ